ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು) :

1)

	1997-98	1998-99	1999-2001	31-12-2000ಕ್ಕೆ
ಖರೀದಿ "	28.50	30.86	36.07	
ಮಾರಾಟ"	30.67	33.02	38.64	22.09
ವ್ಯಾಪಾರ "	2.17	2.16	2.57	ಲಕ್ಷಗಳ
ಲಾಭ				ವ್ಯವಹಾರ
ನಿವ್ವಳ "	2.06	2.15	1.81	ನಡೆಸಿರುತ್ತದೆ
ಲಾಭ				

2) ಅಧ್ಯಕ್ಷರು ಟಿ ಎ : ಡಿ ಎ ಪಡೆದಿರುವುದಿಲ್ಲ.

3) ಇಲ್ಲ.

ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಲಾಭದ ವಿವರ

906 (1040) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಎಲ್ಲಾ ಸಾರಿಗೆ ಸಂಸ್ಥೆಗಳಿಂದ ಹೆಚ್ಚಿನ ಲಾಭಗಳಿಸಿರುವುದು ನಿಜವೇ;

ಆ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 1999-2000, 2000-2001 ಹಾಗೂ 2001-2002 ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ನೀಡಲಾಗಿದೆ;

ಇ) ಧಾರವಾಡ ಜಿಲ್ಲೆಯಲ್ಲಿ ಸಾರಿಗೆ ಇಲಾಖೆ ಪ್ರತಿಯೊಂದು ಗ್ರಾಮಗಳಿಗೆ ಅಸಮರ್ಪಕವಾದ ಸೇವೆ ಸಲ್ಲಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1998-1999 ನೇ ಸಾಲಿನಲ್ಲಿ ಒಟ್ಟು 22.09 ಲಕ್ಷಗಳಿಸಿದೆ ಮತ್ತು 1999-2000ನೇ ಸಾಲಿನಲ್ಲಿ 276.28 ಲಕ್ಷ ಗಳಿಸಿದೆ.

ಆ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1999-2000ನೇ ಸಾಲಿನಲ್ಲಿ ಒಟ್ಟು 444 (376 ಗ್ರಾಮಾಂತರ, 38 ಸುವಿಹಾರಿ ಮತ್ತು 12 ಅಲ್ಟ್ರಾ ಡೀಲಕ್ಸ್) ಹೊಸ ಬಸ್ಸುಗಳನ್ನು ಹಾಗೂ ಪ್ರಸಕ್ತ

2000-2001ನೇ ಸಾಲಿನಲ್ಲಿ ಇದುವರೆಗೂ ಅಂದರೆ ದಿನಾಂಕ: 26-2-2001 ರವರೆಗೆ ಒಟ್ಟು 404 ಹೊಸ ಬಸ್ಸುಗಳನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಭಾಗಗಳಿಗೆ ಹಂಚಿಕೆ ಮಾಡಲಾಗಿದೆ. ಮುಂಬರುವ ವರ್ಷದಲ್ಲಿ ಅಂದರೆ 2001ನೇ ಸಾಲಿನಲ್ಲಿ ಒಟ್ಟು 450 ಹೊಸ ವಾಹನಗಳನ್ನು ಒದಗಿಸಲು ಸಂಸ್ಥೆಯು ಯೋಜನೆಯನ್ನು ಹಾಕಿ ಕೊಂಡಿರುತ್ತದೆ.

ಇ) ಬಂದಿದೆ.

ಈ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 372 ಗ್ರಾಮಗಳಿದ್ದು ಇವುಗಳ ಪೈಕಿ ಸಂಚಾರ ಯೋಗ್ಯ ರಸ್ತೆಗಳಿಲ್ಲದ ಕಾರಣ 11 ಗ್ರಾಮಗಳ ಹೊರತಾಗಿ ಎಲ್ಲಾ ಗ್ರಾಮಗಳಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಹಾಲಿ ಸಾರಿಗೆ ಸೌಲಭ್ಯ ಸಮರ್ಪಕವಾಗಿದ್ದು, ಹೆಚ್ಚುವರಿ ಬೇಡಿಕೆ ಬಂದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಸಂಚಾರ ಯೋಗ್ಯ ರಸ್ತೆ ಸುಧಾರಣೆಗೊಂಡನಂತರ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮ ಜರುಗಿಸಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ವಿಂಗಡಣೆ

907(1041) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು ಅತೀ ದೊಡ್ಡ ತಾಲ್ಲೂಕಿ ಎಂಬ ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಆಡಳಿತಾತ್ಮಕ ದೃಷ್ಟಿಯಿಂದ ಹುಬ್ಬಳ್ಳಿ ಉತ್ತರ, ಹುಬ್ಬಳ್ಳಿ ದಕ್ಷಿಣ ಎಂದು ಬೇರ್ಪಡಿಸಿ ಎರಡು ತಹಶೀಲ್ದಾರ ಕಾರ್ಯಾಲಯಗಳು ಕಾರ್ಯನಿರ್ವಹಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

3) ಬಂದಿದ್ದಲ್ಲಿ, ಯಾವ ವರ್ಷದಿಂದ ಪ್ರಾರಂಭ ಮಾಡಲಾಗುವುದು; ಇಲ್ಲವಾದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು):

1) ಹೌದು

2) ಸರ್ಕಾರದ ಪರಿಶೀಲನೆಯಲ್ಲಿದೆ.

3) ಸರ್ಕಾರದ ಪರಿಶೀಲನೆಯಲ್ಲಿದೆ.

ವಾಹನ ತೆರಿಗೆ ಕುರಿತು

908 (1023) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ವಾಹನ ತೆರಿಗೆ ರೂಪದಲ್ಲಿ ಎಷ್ಟು ತೆರಿಗೆಯನ್ನು ಸಂಗ್ರಹಿಸುತ್ತಿದೆ (ಅದರ ಒಟ್ಟು ಮೊತ್ತವೆಷ್ಟು?